**ಸಾಕ್ಷಿಗೆ ದಿನಾಂಕಃ03-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. TRS ವಕೀಲರಿಂದ ::**

ನಮ್ಮ ಅತ್ತೆ ನನಗೆ ಕ್ರಯಪತ್ರ ಬರೆಯುವ ಸಮಯದಲ್ಲಿ ಅವರಿಗೆ ಸುಮಾರು 93-94 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಈಗ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಸುಮಾರು 70-75 ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು ಅಷ್ಟಾಗಿ ಬರುವುದಿಲ್ಲ. ನನ್ನ ಅತ್ತೆ ಸಿದ್ದರಾಮಕ್ಕ ರವರಿಗೆ ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ನನ್ನ ಅತ್ತೆ ಸಿದ್ದರಾಮಕ್ಕ ನನಗೆ ಕ್ರಯಪತ್ರವನ್ನು 2021 ನೇ ಸಾಲಿನಲ್ಲಿ ಬರೆದುಕೊಟ್ಟಿರಹುದು, ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ಅತ್ತೆ ಸಿದ್ದರಾಮಕ್ಕ ನನಗೆ ಕ್ರಯಪತ್ರವನ್ನು 11.02.2021 ರಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಅತ್ತೆ ಸಿದ್ದರಾಮಕ್ಕ ರವರು ದಿಃ 19.07.2021 ರಂದು ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅತ್ತೆ ಸಿದ್ದರಾಮಕ್ಕ ರವರಿಗೆ ಸಾಯುವ 5-6 ತಿಂಗಳ ಹಿಂದಿನಿಂದಲೂ ಹಾಸಿಗೆ ಹಿಡಿದಿದ್ದರು ಎಂದರೆ ಸಾಕ್ಷಿಯು ಕೇವಲ ಸಾಯುವ 20 ದಿನದ ಹಿಂದೆ ಆ ರೀತಿ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಅತ್ತೆಗೆ ಕನ್ನಡ ಭಾಷೆಯನ್ನು ಓದಲು ಬರೆಯಲು ಬಾರದ ಕಾರಣ ಅವರಿಗೆ ದಾಖಲೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇರಲಿಲ್ಲ ಎಂದರೆ ಸಾಕ್ಷಿ ಅವರು ಇತರರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ರವಿಕುಮಾರು ರವರಿಗೆ ವಕೀಲರ ಮುಖಾಂತರ ನೋಟೀಸ್ ನೀಡಿರುವ ಬಗ್ಗೆ ವಕೀಲರಿಗೆ ಮಾಹಿತಿಯನ್ನು ನನ್ನ ಅತ್ತೆ ಸಿದ್ದರಾಮಕ್ಕ ರವರೇ ನೀಡಿರುತ್ತಾರೆ. ರವಿಕುಮಾರ್ ರವರ ಹೆಸರಿನಲ್ಲಿ ಮಾಡಿದ ದಾನಪತ್ರ ಮೋಸದಿಂದ ಮಾಡಿಕೊಳ್ಳಲಾಗಿದೆ ಎನ್ನುವ ಮಾಹಿತಿ ಸಹ ನನ್ನ ಅತ್ತೆ ಸಿದ್ದರಾಮಕ್ಕ ರವರು ವಕೀಲರಿಗೆ ನೀಡಿದ್ದರು ಎಂದರೆ ಸರಿ. ಸದರಿ ನೋಟೀಸ್ ಅನ್ನು ಕೊಡಿಸುವ ಸಮಯದಲ್ಲಿ ನನ್ನ ಅತ್ತೆ ಸಿದ್ದರಾಮಕ್ಕ ಜೊತೆ ವಕೀಲರ ಕಚೇರಿಗೆ ನನ್ನ ಮೃತ ಗಂಡ, 1 ನೇ ಪ್ರತಿವಾದಿ ಹಾಗೂ 4 ನೇ ಪ್ರತಿವಾದಿ ಮತ್ತು ಇತರೇ ಹೆಣ್ಣು ಮಕ್ಕಳು ಹೋಗಿದ್ದರು ಎಂದರೆ ಸರಿ. ನನ್ನ ಅತ್ತೆ ಮಾವನ ಹೆಣ್ಣು ಮಕ್ಕಳಲ್ಲಿ 4 ಜನ ನನ್ನ ಜೊತೆ ನಾನು ಕ್ರಯಪತ್ರ ಮಾಡಿಸಿಕೊಳ್ಳುವ ಸಮಯದಲ್ಲಿ ಒಳ್ಳೆಯ ವಿಶ್ವಾಸದಲ್ಲಿ ಇದ್ದರು. ನನ್ನ ಅತ್ತೆ ಸಿದ್ದರಾಮಕ್ಕ ರವರು ನನ್ನ ಹೆಸರಿಗೆ ಕ್ರಯಪತ್ರ ಮಾಡಿರುವ ವಿಚಾರದ ಬಗ್ಗೆ ನನ್ನ ಅತ್ತೆ ಮಾವನ ಹೆಣ್ಣು

ಮಕ್ಕಳಿಗೆ ತಿಳಿದಿರುತ್ತದೆ ಆದರೆ ಅವರು ಕ್ರಯಪತ್ರ ಮಾಡಿಸಿಕೊಳ್ಳುವ ದಿನ ಉಪ ನೋಂದಣಾಧಿಕಾರಿ ಕಚೇರಿಗೆ ಬಂದಿರಲಿಲ್ಲ. ಸದರಿ ಹೆಣ್ಣು ಮಕ್ಕಳ ಸಹಿಯನ್ನು ಕ್ರಯಪತ್ರಕ್ಕೆ ಪಡೆಯಲು ನನಗೆ ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಅವರನ್ನು ಕರೆದಿರುತ್ತೇನೆ ಆದರೆ ಅವರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರತಿವಾದಿಗಳನ್ನು ಆ ದಿನ ಕರೆಯಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅತ್ತೆ ಅವರ ಹಾಜರಾತಿ ಅವಶ್ಯಕತೆ ಇಲ್ಲ ಎಂದು ನನಗೆ ತಿಳಿಸಿರುತ್ತಾರೆ. ಕ್ರಯಪತ್ರದ ಮೌಲ್ಯ 1 ಲಕ್ಷ 30 ಸಾವಿರ ಆಗಿತ್ತು. ಸದರಿ ಹಣವನ್ನು ಅಜ್ಜಿಯ ಬ್ಯಾಂಕ್ ಖಾತೆಗೆ ನಾನು ಪಾವತಿ ಮಾಡಿರುತ್ತೇನೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟ ಬ್ಯಾಂಕ್ ಪುಸ್ತಕವನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಹೇಳುತ್ತಿರುವ ಕ್ರಯಪತ್ರಕ್ಕೆ ಸಂಬಂಧಪಟ್ಟಂತೆ ನನ್ನ ಅತ್ತೆಗೆ ಯಾವುದೇ ಹಣ ನೀಡದಿದ್ದರೂ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಮೋಸದಿಂದ ಸುಳ್ಳು ಕ್ರಯಪತ್ರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಸಿದ್ದರಾಮಕ್ಕ ಯಾವುದೇ ಕ್ರಯಪತ್ರ ಬರೆದುಕೊಡದಿದ್ದರೂ ನಾನೇ ಅದನ್ನು ಸೃಷ್ಟಿ ಮಾಡಿ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಸಿದ್ದರಾಮಕ್ಕ ರವರು ದಾವಾ ಶೆಡ್ಯೂಲ್ ಸ್ವತ್ತನ್ನು ಹಿಂದಿನ ಮಾಲೀಕರಿಂದ ಎಷ್ಟು ಮೌಲ್ಯಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ಸಂಬಂಧಪಟ್ಟಂತೆ ನನ್ನ ಅತ್ತೆ ಸಿದ್ದರಾಮಕ್ಕ ಆಗಲೀ, ನಾನಾಗಲೀ ಅಥವಾ ಇತರೇ ಪ್ರತಿವಾದಿಗಳಾಗಲೀ ಯಾವುದೇ ಮೌಲ್ಯ ನೀಡಿರುವುದಿಲ್ಲ, ಅದು ಕೇವಲ ನಾಮಕಾಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ದಿನಾಂಕ 14.06.2011 ರ ಒಂದು ಅನೋಂದಾಯಿತ ವಿಭಾಗ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಅವರ ಕುಟುಂಬದಲ್ಲಿ ಆದ ವಿಭಾಗ ಪತ್ರ ಎಂದು ನೋಡಿ ಒಪ್ಪಿರುತ್ತಾರೆ. ಸದರಿ ದಾಖಲೆಯನ್ನು ಪ್ರತಿವಾದಿಗಳ ಪರ ವಕೀಲರು ನಿಶಾನೆಗೊಳಿಸಲು ಕೇಳಿಕೊಂಡಿದ್ದು ಸದರಿ ದಾಖಲಾತಿಯ ಮೇಲೆ ಸಾಕಷ್ಟು ಮುದ್ರಾಂಕ ಶುಲ್ಕ ಪಾವತಿ ಆಗದಿರುವ ಕಾರಣ ಅದನ್ನು ಈ ಹಂತದಲ್ಲಿ ನಿಶಾನೆಗೊಳಿಸಲು ಬರುವುದಿಲ್ಲ ಎಂದು ಸದರಿ ಮನವಿಯನ್ನು ತಿರಸ್ಕರಿಸಲಾಯಿತು. ಈ ತೋರಿಸಿದ ವಿಭಾಗ ಪತ್ರವನ್ನು ನಾನಾಗಲೀ, ನನ್ನ ಮೃತ ಗಂಡನಾಗಲೀ ಯಾವತ್ತು ಸಹ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ಕ್ರಯಪತ್ರದ ಆಧಾರದಲ್ಲಿ ನಾನು ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿದಾಗ ಕಂದಾಯ ಇಲಾಖೆಯ ಮುಂದೆ 1 ಮತ್ತು 4 ನೇ ಪ್ರತಿವಾದಿಗಳು ತಕರಾರು ಹಾಕಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ವಿಭಾಗ ಪತ್ರದ ಹಿಸ್ಸೆಯಂತೆ ಪಾಲುದಾರರು ಇವರೆಗೂ ಅವರವರ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ನಮಗೆ ಬಂದ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇರುತ್ತೇವೆ, ಇತರರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತು ನನ್ನ ಅತ್ತೆಯ ಸ್ವಯಾರ್ಜಿತ ಆಸ್ತಿಯಾಗದ ಕಾರಣ ಅವರಿಗೆ ಅದರ ಬಗ್ಗೆ ಯಾವುದೇ ಕ್ರಯಪತ್ರ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅತ್ತೆ ಸಿದ್ದರಾಮಕ್ಕ ರವರ ಬಳಿ ಯಾವುದೇ ಬ್ಯಾಂಕ್ ಖಾತೆ ಇರುವುದಿಲ್ಲ ಆದಕಾರಣ ನಾನು ಹಣ ನೀಡಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆ ಮುಖಾಂತರ ಮೋಸದಿಂದ ಕ್ರಯಪತ್ರ ಮಾಡಿಸಿಕೊಡಿರುವ ಕಾರಣ ಅದರ ಆಧಾರದಲ್ಲಿ ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇನೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಭಾಗ ಪತ್ರದಲ್ಲಿ ಸಿದ್ದರಾಮಕ್ಕ ರವರಿಗೆ ಯಾವುದೇ ಜಮೀನು ಹೋಗಿರುವುದಿಲ್ಲ ಎಂದರೆ ದಾವಾ ಶೆಡ್ಯೂಲ್ ಸ್ವತ್ತು ಸಿದ್ದರಾಮಕ್ಕನ ಜೀವನಾಂಶಕ್ಕೆ ಕಾಯ್ದಿರಿಸಲಾಗಿತ್ತು ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತು ವಿಭಾಗಪತ್ರದ ಅಡಿ 1 ನೇ ಪ್ರತಿವಾದಿಗೆ ಹೋಗಿರುವ ಕಾರಣ ಅದರಬಗ್ಗೆ ಸಿದ್ದರಾಮಕ್ಕರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರಕ್ಕೆ ಯಾರು ಸಾಕ್ಷಿದಾರರು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಬಿಕ್ಕಲ್ಲಂದಾರರು ವಕೀಲರಾದ ನಿಂಗಪ್ಪ ಆಗಿರುತ್ತಾರೆ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದಿದ್ದರೂ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: